ಸಿಸಿ ನಂಃ **712/2025**
ಪಿ.ಡಬ್ಲ್ಯೂಃ **1**

ದಿನಾಂಕಃ **23-01-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ  ವಿ ಬಿ ಹೆಚ್ ವಕೀಲರಿಂದಃ

8073293431 ನನ್ನ ಮೊಬೈಲ್ ನಂಬರು ಆಗಿರುತ್ತದೆ. ಆರೋಪಿಯ ಮೊಬೈಲ್ ನಂಬರು ನನಗೆ ಗೊತ್ತಿಲ್ಲ. ಆರೋಪಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿಯು ನನ್ನ ಸ್ನೇಹಿತ ಆಗಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಡಿಪ್ಲೊಮೊ ವಿದ್ಯಾಭ್ಯಾಸ ಮಾಡಿದ್ದೇನೆ. ಆರೋಪಿ ಸಂಗೀತ ವಿದ್ಯಾಭ್ಯಾಸ ಮಾಡಿದ್ದಾರೆ. ಆರೋಪಿ ನನಗೆ ಬೆಂಗಳೂರಿನ ರಾಜಾಜಿ ನಗರದಲ್ಲಿ ಪರಿಚಯ ಆಗಿರುತ್ತಾರೆ. ನನಗೆ 2020 ರಿಂದ ಆರೋಪಿಯ ಪರಿಚಯ ಇದೆ. ನಾನು ನನ್ನ ಮನೆಯ ಯಾವುದೇ ಕಾರ್ಯಕ್ರಮಕ್ಕೆ ಆರೋಪಿಯನ್ನು ಆಹ್ವಾನ ಮಾಡಿಲ್ಲ. ಅದೇ ರೀತಿ ನಾನು ಸಹ ಆರೋಪಿಯ ಮನೆಯಲ್ಲಿನ ಯಾವುದೇ ಕಾರ್ಯಕ್ರಮಕ್ಕೆ  ಹೋಗಿಲ್ಲ. ಆರೋಪಿಯ ಕುಟುಂಬದಲ್ಲಿ ಎಷ್ಟು ಜನ ಸದಸ್ಯರಿದ್ದಾರೆ ಹಾಗೂ ಅವರೆಲ್ಲ ಏನು ಕೆಲಸ ಮಾಡುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹಾಗೂ ಆರೋಪಿತ ಬೆಂಗಳೂರಿನ ರಾಜಾಜಿ ನಗರದಲ್ಲಿ ಓಡಾಡಿ ತಿಂಡಿ-ದಿನಸು ತಿಂದಿರುತ್ತೇವೆ. ರಾಜಾಜಿ ನಗರ ಹೊರತು ಪಡಿಸಿ ಬೇರೆ ಎಲ್ಲಿಯೂ ನಾವು ಭೇಟ್ಟಿಯಾಗಿಲ್ಲ. ನಿಮ್ಮ ಕಷ್ಟಗಳನ್ನು ಎಂದಾದರು ಆರೋಪಿಗೆ ಹೇಳಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಈಗ ಮೂರು ವರ್ಷಗಳ ಹಿಂದೆ ನನಗೆ ಹಣದ ಅಡಚಣೆ ಇದ್ದಾಗ ಆರೊಪಿಗೆ ಹೇಳಿದ್ದೆನು ಹಾಗೂ ಆತ ನನಗೆ ರೂ.50 ಸಾವಿರ ಹಣ ನೀಡಿದ್ದರು ಎಂದು ನುಡಿಯುತ್ತಾರೆ. ಯಾವುದೇ ದಾಖಲೆ ಪಡೆಯದೆ ನನಗೆ ಆರೋಪಿ ಸದರಿ ಸಾಲ ನೀಡಿದ್ದರು. ಆರೋಪಿಯೂ ಸಹ ಈಗ ಎರಡು ವರ್ಷಗಳ ಹಿಂದೆ ತನಗೆ ಸಂಗೀತ ತರಗತಿ ನಡೆಸಲು ಹಾಗೂ ತನ್ನ ಸ್ನೇಹಿತನೊಂದಿಗೆ ಸೇರಿ ವಿಜಯಪುರದಲ್ಲಿ ರಕ್ತಚಂದನ ಮತ್ತು ಶ್ರೀಗಂಧದ ಮರ ಬೆಳೆಸಲು ಹಣದ ಅವಶ್ಯಕತೆ ಇದೆ ಎಂದು ನನಗೆ ಹೇಳಿದ್ದರು. ನಿಮಗೆ ಆರೋಪಿಯ ಸ್ನೇಹಿತರ ಹೆಸರು ಗೊತ್ತಿದೆಯೇ ಎಂದರೆ ಸಾಕ್ಷಿಯು ಶಿವಾನಂದ ಹಿಪ್ಪರಿಗಿ ಎಂಬಾತ ಆರೋಪಿತನ ಸ್ನೇಹಿತ ಆಗಿದ್ದರು ಎಂದು ನುಡಿಯುತ್ತಾರೆ.

2. ಆರೋಪಿ ಯಾದಗಿರಿಗೆ ಒಂದು ಸಲ ಬಂದಿದ್ದರು. ಆಗ ನನಗೆ ಯಾದಗಿರಿಯ ಬಸ್ ನಿಲ್ದಾಣದಲ್ಲಿ ಆರೋಪಿ ಭೇಟ್ಟಿ ಆಗಿದ್ದರು. ನಾನು ಆರೋಪಿಗೆ ಬೆಂಗಳೂರಿನಲ್ಲಿ ಎರಡು ಸಲ ಭೇಟ್ಟಿ ಆಗಿದ್ದೆನು. 2020ರ ನಂತರ ನಮ್ಮ ಮನೆಯಲ್ಲಿ ದಿನಾಂಕ 07.02.2025 ರಂದು ನನ್ನ ತಮ್ಮ ಮದುವೆ ಕಾರ್ಯಕ್ರಮ ಮಾತ್ರ ಆಗಿರುತ್ತದೆ. ನಾನು ಸದರಿ ಕಾರ್ಯಕ್ರಮಕ್ಕೆ ಆರೋಪಿಯನ್ನು ಆಹ್ವಾನ ಮಾಡಿರಲಿಲ್ಲ. ಆರೋಪಿ ಹೊಂದಿರುವ ಆಸ್ತಿಗಳ ಬಗ್ಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಇಲ್ಲ, ಆತನ ಸಂಗೀತ ಶಾಲೆ ಮಾತ್ರ ನನಗೆ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಸದರಿ ಶಾಲೆಯಿಂದ ಎಷ್ಟು ಆದಾಯ ಹೊಂದಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿತನ ಕುಟುಂಬದವರು ಹೊಂದಿರುವ ಆಸ್ತಿಗಳ ಬಗ್ಗೆಯೂ ಸಹ ನನಗೆ ಮಾಹಿತಿ ಇಲ್ಲ.

3. ನೀವು ಯಾವ ಯಾವ ಆಸ್ತಿ ಹೊಂದಿದ್ದೀರಿ ಎಂದರೆ ಸಾಕ್ಷಿ ದೇವದುರ್ಗದಲ್ಲಿ 02 ಹಾಗೂ ಕಲಬುರಗಿಯಲ್ಲಿ 01 ನಿವೇಶನ ಮಾತ್ರ ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪ್ಯಾನ್ ಕಾರ್ಡ್ ಹಾಗೂ ಆಧಾರ ಕಾರ್ಡ್ ತಯಾರಿಸಿ ಕೊಡುವ ಕೇಂದ್ರ ನಡೆಸುತ್ತಿದ್ದೇನೆ. ನಾನು ಸದರಿ ಕೆಲಸದಿಂದ ಪ್ರತೀ ತಿಂಗಳಿಗೆ ರೂ.35 ಸಾವಿರ ಆದಾಯ ಹೊಂದಿರುತ್ತೇನೆ. ನನಗೆ ಒಬ್ಬ ತಂಗಿ ಹಾಗೂ ಒಬ್ಬ ತಮ್ಮ ಇದ್ದು, ನನ್ನ ತಂಗಿ ಮದುವೆ ಮಾಡಿಕೊಂಡು ಗಂಡನ ಮನೆಯಲ್ಲಿ ಇದ್ದಾರೆ ಹಾಗೂ ನನ್ನ ತಮ್ಮ ಮೆಕಾನಿಕಲ್ ಇಂಜನೀಯರ್ ಆಗಿದ್ದು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾನೆ. ಆರೋಪಿಗೆ ನನ್ನ ತಮ್ಮ ಹಾಗೂ ತಂಗಿಯ ಪರಿಚಯ ಇರುವುದಿಲ್ಲ.

4. ನನಗೆ ಈಗ 36 ವರ್ಷ ವಯಸ್ಸಾಗಿದೆ. ನಾನು ಕಳೆದ 16 ವರ್ಷಗಳಿಂದ ಮೇಲೆ ಹೇಳಿದ ಅಂಗಡಿ (ಕೇಂದ್ರ) ನಡೆಸುತ್ತಿದ್ದೇನೆ. ನಾನು ವಿವಾಹಿತನಾಗಿರುತ್ತೇನೆ. ನನಗೆ ಇಬ್ಬರು ಮಕ್ಕಳಿದ್ದಾರೆ. ನನ್ನ ಹಿರಿಯ ಮಗ ಆಂಗ್ಲ ಮಾಧ್ಯಮ ಶಾಲೆಯಲ್ಲಿ 5ನೇ ತರಗತಿಯಲ್ಲಿ ಓದುತ್ತಿದ್ದು, ನನ್ನ ಕಿರಿಯ ಮಗನನ್ನು ಇನ್ನು ಶಾಲೆಗೆ ಸೇರಿಸಿರುವುದಿಲ್ಲ. ನನ್ನ ಹಿರಿಯ ಮಗನ ವಾರ್ಷಿಕ ಶಾಲಾ ಖರ್ಚು ಸುಮಾರು ರೂ. 40 ಸಾವಿರ ಆಗುತ್ತದೆ.

5. ನೀವು ಆರೋಪಿಯೊಂದಿಗೆ ಪೋನಿನಲ್ಲಿ ಎಷ್ಟು ಸಲ ಮಾತನಾಡಿದ್ದೀರಿ ಎಂದರೆ ಸಾಕ್ಷಿ 4-5 ಸಲ ಮಾತನಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ನೀಡಿದ ಹಣ ಮರುಪಾವತಿ ಮಾಡುವಂತೆ ಆರೋಪಿಯೊಂದಿಗೆ ಪೋನಿನಲ್ಲಿ ಮಾತನಾಡಿದ್ದೆನು ಹಾಗೂ ಆತ ಹೆಚ್ಚಿನ ಸಾಲ ಬೇಕಾಗಿದೆ ಎಂದು ಸಹ ನನಗೆ ಹೇಳಿದ್ದನು. ಸಾಲದ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ನನಗೆ ಚೆಕ್ ಮಾತ್ರ ನೀಡಿದ್ದಾರೆ. ಆರೋಪಿಗೆ ಸಾಲ ನೀಡುವ ಸಮಯದಲ್ಲಿ ಯಾವುದೇ 3 ನೇ ವ್ಯಕ್ತಿ ಹಾಜರು ಇರಲಿಲ್ಲ. ಆತ ನನಗೆ ಚೆಕ್ ನೀಡುವಾಗಲೂ ನಾವು ಇಬ್ಬರು ಮಾತ್ರ ಹಾಜರು ಇದ್ದೆವು. ಆರೋಪಿಗೆ ವಿಶ್ವಾಸದ ಮೇರೆಗೆ ಹಣ ನೀಡಿರುವುದರಿಂದ ಆತನಿಂದ ಜಾಮೀನು ಪಡೆದುಕೊಂಡಿಲ್ಲ. ನಾನು ಯಾವತ್ತು ಆರೋಪಿಯ ಮನೆಗೆ ಹೋಗಿಲ್ಲ ಹಾಗೂ ಆತ ನನಗೆ ತಮ್ಮ ಮನೆಯನ್ನು ತೋರಿಸಿಲ್ಲ. ಆರೋಪಿಯೂ ಸಹ ವಿವಾಹಿತನಾಗಿರುತ್ತಾನೆ. ಆರೋಪಿಗೆ ಎಷ್ಟು ಜನ ಮಕ್ಕಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಆರೋಪಿಯ ಮದುವೆ ಯಾವಾಗ ಹಾಗೂ ಎಲ್ಲಿ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿ ಬ್ರಾಹ್ಮಣ ಜಾತಿಗೆ ಸೇರಿದವರಾಗಿರುತ್ತಾನೆ.

6. ಸಾಕ್ಷಿಗೆ ನಿಪಿ-1 ರ ಚೆಕ್ಕನ್ನು ತೋರಿಸಿ ಅದರಲ್ಲಿನ ವಿವರಗಳನ್ನು ಯಾರು ಬರೆದಿದ್ದಾರೆ ಎಂದರೆ ಸಾಕ್ಷಿಯು ಆರೊಪಿ ನನಗೆ ಖಾಲಿ ಚೆಕ್ ನೀಡಿದ್ದರು ಹಾಗಾಗಿ ವಿವರಗಳನ್ನು ನಾನು ಬ್ಯಾಂಕ್ ಸಿಬ್ಬಂದಿ ಕಡೆಯಿಂದ ಬರೆಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸಾಲಗಾರ ಮೊದಲು ಪಡೆದುಕೊಂಡ ಸಾಲವನ್ನು ಮರುಪಾವತಿ ಮಾಡದೇ ಇದ್ದಾಗ ಆತನಿಗೆ ಇನ್ನೊಂದು ಸಲ ಸಾಲ ನೀಡಲು ಮನಸ್ಸಾಗುವುದಿಲ್ಲ ಎಂದರೆ ಸರಿ. ನಾನು ಆರೋಪಿಗೆ ದಿನಾಂಕ 24.02.2024 ರಂದು ರೂ.3 ಲಕ್ಷ ನಗದು ಸಾಲ ನೀಡಿರುವುದಾಗಿ ದೂರಿನಲ್ಲಿ ಬರೆಸಿದ್ದೇನೆಂದರೆ ಸರಿ. ಆ ನಂತರ 06 ತಿಂಗಳ ಬಳಿಕ ದಿನಾಂಕ 17.09.2024 ರಂದು ಆರೋಪಿಗೆ ಮತ್ತೆ ರೂ.12 ಲಕ್ಷ ಸಾಲ ನೀಡಿರುವುದಾಗಿ ಸಹ ಬರೆಸಿದ್ದೇನೆಂದರೆ ಸರಿ. ರೂ.3 ಲಕ್ಷ ಕ್ಕಿಂತ ಹೆಚ್ಚಿನ ಮೊತ್ತದ ವ್ಯವಹಾರವನ್ನು ಕಡ್ಡಾಯವಾಗಿ ಚೆಕ್ ಅಥವಾ ಬ್ಯಾಂಕ್ ವರ್ಗಾವಣೆ ಮೂಲಕ ಮಾಡಬೇಕೆಂದು ಕಾನೂನಿನ ನಿಯಮ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ನಿವೃತ್ತಿ ನಂತರ ಬಂದ ಹಣವನ್ನು ನಾನು ಪಡೆದುಕೊಂಡು ಆರೊಪಿಗೆ ಸಾಲವಾಗಿ

ಕೊಟ್ಟಿದ್ದೆನು. ದೂರಿನಲ್ಲಿ ನನ್ನ ತಂದೆಯ ನಿವೃತ್ತಿ ಹಣ ಎಂದು ನಿಖರವಾಗಿ ನಮೂದಿಸಿಲ್ಲ, ನನ್ನ ಹಿರಿಯರಿಂದ ಒಪ್ಪಿಸಿ ಅವರ ನಿವೃತ್ತಿಯ ಹಣವನ್ನು ನೀಡಿದ್ದೇನೆ ಎಂದು ಮಾತ್ರ ಬರೆಸಿದ್ದೇನೆಂದರೆ ಸರಿ. ನಾನೇ ಸ್ವತಃ ಹಣ ತೆಗೆದುಕೊಂಡು ಬೆಂಗಳೂರಿನ ರಾಜಾಜಿ ನಗರಕ್ಕೆ ಹೋಗಿ ಆರೋಪಿಗೆ ಸಾಲವಾಗಿ ನೀಡಿದ್ದೆನು. ಎರಡು ಸಲ ಹಣವನ್ನು ನಾನೇ ಬೆಂಗಳೂರಿಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದೆನು. ನಾನು ಆಗ ರೈಲಿನಲ್ಲಿ ಬೆಂಗಳೂರಿಗೆ ಹೋಗಿದ್ದೆನು. ನಾನು ಜನರಲ್ ಡಬ್ಬಿಯಲ್ಲಿ ಪ್ರಯಾಣ ಮಾಡಿದ್ದೆನು. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸಾಲ ನೀಡಿದ್ದೇನೆ, ಬಡ್ಡಿ ಆಸೆಗಾಗಿ ನೀಡಿರುವುದಿಲ್ಲ.

7. ಆರೋಪಿ ತಾನು ತಿಂಗಳಿಗೆ ರೂ.1 ಲಕ್ಷ ಆದಾಯ ಹೊಂದಿರುವುದಾಗಿ ನನಗೆ ತಿಳಿಸಿದ್ದರು. ಯಾವುದೇ ಜಾಮೀನು ಇಲ್ಲದೇ ಹಾಗೂ ಒಬ್ಬ ವ್ಯಕ್ತಿಯ ಸಂಪೂರ್ಣ ಪರಿಚಯ ಮತ್ತು ಆತನ ಆದಾಯದ ಬಗ್ಗೆ ನಿಖರ ಮಾಹಿತಿ ಇಲ್ಲದೇ ಯಾವುದೇ ವ್ಯಕ್ತಿ ರೂ.15 ಲಕ್ಷ ಮೊತ್ತದ ಸಾಲವನ್ನು ನೀಡುವುದಿಲ್ಲ ಎಂದರೆ ಸಾಕ್ಷಿಯು ನಾನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ರೂ.15 ಲಕ್ಷ ಸಾಲ ನೀಡುವ ಆರ್ಥಿಕ ಸಾಮಾರ್ಥ್ಯ ನಿಮಗೆ ಇಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ನಿವೃತ್ತಿ ನಂತರ ಬಂದ ಹಣವನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ನನಗೆ ತಮ್ಮ ನಿವೃತ್ತಿ ನಂತರದ ಹಣ ಕೊಟ್ಟಿಲ್ಲ ಹಾಗೂ ನಾನು ಸದರಿ ಹಣವನ್ನು ಆರೋಪಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯನ್ನು ನನ್ನ ಪರವಾಗಿ ಸಾಕ್ಷ ವಿಚಾರಣೆ ಮಾಡಿಸಬಲ್ಲೆನು. ನಿಮ್ಮ ತಂದೆ ಮನೆಯಲ್ಲಿನ ಹಣ ಕೊಟ್ಟಿದ್ದಾರೆಯೇ ಅಥವಾ ಬ್ಯಾಂಕಿನಿಂದ ಪಡೆದುಕೊಂಡು ಬಂದು ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿಯು ಮನೆಯಲ್ಲಿನ ಹಣ ಕೊಟ್ಟಿದ್ದರು ಎಂದು ನುಡಿಯುತ್ತಾರೆ.

8. ಶಿವಾನಂದ ಉಪ್ಪಾರ ಎಂಬಾತ ನಿಮ್ಮ ಸ್ನೇಹಿತಾ ಆಗಿರುತ್ತಾರೆ ಎಂದರೆ ಸಾಕ್ಷಿಯು ಆತನ ಹೆಸರು ಶಿವಾನಂದ ಹಿಪ್ಪರಗಿ ಆಗಿದ್ದು ಆತ ಆರೋಪಿಯ ಸ್ನೇಹಿತನಾಗಿರುತ್ತಾನೆ, ನನ್ನ ಸ್ನೇಹಿತ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಿಪಿ-1ರ ಚೆಕ್ಕನುನ ಸದರಿ ಶಿವಾನಂದ ರವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿ ಸದರಿ ಶಿವಾನಂದ ರವರಿಂದ ರೂ.2 ಲಕ್ಷ ಸಾಲ ಪಡೆದುಕೊಂಡು ನಿಪಿ-1ರ ಚೆಕ್ಕನ್ನು ಅವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಂತರ ಆರೋಪಿ ಸದರಿ ಸಾಲವನ್ನು

ಮರುಪಾವತಿ ಮಾಡಿದರೂ ಶಿವಾನಂದ ರವರು ಆರೋಪಿಗೆ ಚೆಕ್ಕನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ಶಿವಾನಂದ ರವರ ಕಡೆಯಿಂದ ನಿಪಿ-1ರ ಚೆಕ್ಕನ್ನು ಪಡೆದುಕೊಂಡು ಅದರಲ್ಲಿ ರೂ.15 ಲಕ್ಷ ಮೊತ್ತ ನಮೂದಿಸಿಕೊಂಡು ಪ್ರಸ್ತುತ ದೂರು ದಾಖಲಿಸಿದ್ದೇನೆಂದರೆ ಸರಿಯಲ್ಲ. ನನಗೆ ಆರೋಪಿತನ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಸದರಿ ಶಿವಾನಂದ ರವರು ಸೇರಿಕೊಂಡು ನಿಪಿ-1ರ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುವುದರಿಂದ ಆರೋಪಿ ನಮ್ಮ ವಿರುದ್ಧ ಯಾದಗಿರಿ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಹಾಗೂ ನಗರ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ಸದರಿ ದೂರು ದಾಖಲಿಸಿಕೊಳ್ಳದ ಕಾರಣ ಆರೋಪಿ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸುವವರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಶಿವಾನಂದ ರವರ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ